ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 1310 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:05-12-2017

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತಿಗಳು.

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತಿಗಳು ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಯಡಿ ಅರ್ಜಿಗಳನ್ನು ಸ್ವೀಕರಿಸಿ, ಪ್ರತಿ ಅರ್ಜಿಯ ಸೇವಾ ದರ ರೂ.50/- ಅನ್ನು ಗ್ರಾಮ ಪಂಚಾಯತಿ ನಿಧಿಗೆ ಜಮೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿ ಆಹಾರ, ನಾಗರೀಕ ಸರಬರಾಜು, ಗ್ರಾಹಕ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ ರವರ ಅರೆ ಸರ್ಕಾರಿ ಪತ್ರ ದಿನಾಂಕ:25-11-2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರೀಕ ಸರಬರಾಜು, ಗ್ರಾಹಕ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ ರವರ ಅರೆ ಸರ್ಕಾರಿ ಪತ್ರದಲ್ಲಿ 2017ನೇ ಸಾಲಿನ ಡಿಸೆಂಬರ್ ಮೊದಲನೆ ವಾರದಿಂದ ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆಯ ಅರ್ಜಿಗಳು ಗ್ರಾಮ ಪಂಚಾಯತಿಗಳಿಗೆ ಸ್ವೀಕೃತವಾಗಲಿದ್ದು, ನಕಲಿ ಅರ್ಜಿಗಳ ಹಾವಳಿಯನ್ನು ತಡೆಯಲು ಆಧಾರ್ ಕಾರ್ಡ್ ಸಂಖ್ಯೆಯನ್ನು ಅರ್ಜಿ ನೊಂದಾಯಿಸುವಾಗ ಬಳಸಲಾಗುತ್ತಿದೆ. ಹಾಗೂ ಪ್ರತಿ ಅರ್ಜಿಯ ಸೇವಾ ದರ ರೂ.50/- ಎಂದು ನಿಗಧಿಪಡಿಸಿ ಹಾಗೂ ಸದರಿ ಮೊತ್ತವನ್ನು ಗ್ರಾಮ ಪಂಚಾಯತಿಯ ಆದಾಯವೆಂದು ಪರಿಗಣಿಸಿ, ಗ್ರಾಮ ಪಂಚಾಯತಿಯ ನಿಧಿಗೆ ಜಮೆ ಮಾಡಲು ತಿಳಿಸಿರುತ್ತಾರೆ.

ಆದುದರಿಂದ ಉಪನಿರ್ದೇಶಕರು, ಆಹಾರ ಇಲಾಖೆ ರವರು ಯೋಗ್ಯ ಏಜೆನ್ಸಿಯ ಮೂಲಕ ಬಯೋಮೆಟ್ರಿಕ್ device ಅನ್ನು ನಿಯಮಾನುಸಾರ ನಿಗಧಿತ ಕೋಟೇಶನೊಂದಿಗೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ವಿತರಿಸಲು ಅಗತ್ಯ ಕ್ರಮ ವಹಿಸುತ್ತಾರೆ ಹಾಗೂ ಪ್ರತಿ ಬಯೋಮೆಟ್ರಿಕ್ device ನ ಮೊತ್ತವು ಅಂದಾಜು ರೂ.4,500/- ಆಗಿರುತ್ತದೆ. ಸದರಿ ಮೊತ್ತವನ್ನು ಗ್ರಾಮ ಪಂಚಾಯತಿಯ ನಿಧಿಯಿಂದ ಭರಿಸಬಹುದಾಗಿರುತ್ತದೆ ಹಾಗೂ ಸದರಿ ಮೊತ್ತವನ್ನು ಪುನಃ ಅರ್ಜಿಯ ಸೇವಾದರದ ಮೂಲಕ ಗ್ರಾಮ ಪಂಚಾಯತಿಯ ನಿಧಿಗೆ ಭರಿಸಿಕೊಳ್ಳಬಹುದಾಗಿರುತ್ತದೆ ಎಂದು ತಮಗೆ ತಿಳಿಸಿದೆ.

ತಮ್ಮ ನಂಬುಗೆಯ,

5/12/17

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

1) ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರೀಕ ಸರಬರಾಜು, ಗ್ರಾಹಕ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2) ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು .
4) ವಿಶೇಷ ಅಧಿಕಾರಿ, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕೋರಿದೆ.